# ಕರ್ನಾಟಕ ಪರಿಷತ್ತು
## (153ನೇ ಅಧಿವೇಶನ)

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **67(701)** |
| ಸದಸ್ಯರ ಹೆಸರು | : | ಶ್ರೀ ಸುನಿಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ್ದ ದಿನಾಂಕ | : | 22.07.2024 |
| ಉತ್ತರಿಸುವವರು | : | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಅರಣ್ಯ ಕಾಯ್ದೆ-1963 ರ ಕಲಂ-4 ರಡಿ ಅಧಿಸೂಚಿಸಿರುವ ಪ್ರಕರಣಗಳಲ್ಲಿ ಅರಣ್ಯ ಕ್ಷೇತ್ರ ನಿರ್ಧರಣೆ ಮಾಡುವ ಕಾರ್ಯಕ್ಕಾಗಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನು (ನಿವೃತ್ತಿ ಅಧಿಕಾರಿಗಳನ್ನು) ನೇಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ಹಾಗಿದ್ದಲ್ಲಿ, ಸದರಿ ಅಧಿಕಾರಿಗಳನ್ನು ನೇಮಿಸುವಲ್ಲಿ ಅನುಸರಿಸಲಾದ ಮಾನದಂಡಗಳೇನು; (ವಿವರ ನೀಡುವುದು) | ಸರ್ಕಾರದ ಆದೇಶ ಸಂ: ಅಪಜೀ 171 ಅಪಸೇ 2018, ಬೆಂಗಳೂರು, ದಿನಾಂಕ: 31.07.2019ರ ಆದೇಶದಲ್ಲಿ ನಿಗದಿಪಡಿಸಿದ ಮಾನದಂಡಗಳನ್ವಯ ಗುತ್ತಿಗೆ ಆಧಾರದ ಮೇಲೆ ನಿವೃತ್ತ ಸಹಾಯಕ ಆಯುಕ್ತರುಗಳು (ಕಂದಾಯ) ರವರನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಳ್ಳಲಾಗಿದೆ. **(ಅನುಬಂಧ-1 ರಲ್ಲಿ ಒದಗಿಸಿದೆ)** |
| ಇ) | ರಾಜ್ಯದಲ್ಲಿ ಈ ರೀತಿ ಎಷ್ಟು ಅಧಿಕಾರಿಗಳನ್ನು ನೇಮಿಸಲಾಗಿರುತ್ತದೆ; (ಪೂರ್ಣ ವಿವರ ನೀಡುವುದು) | ಪ್ರಸ್ತುತ ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ಒಟ್ಟು 8 ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನು ನೇಮಿಸಲಾಗಿರುತ್ತದೆ.**(ಅನುಬಂಧ-2 ರಲ್ಲಿ ಒದಗಿಸಿದೆ)** |
| ಈ) | ಸದರಿ ಪ್ರಕರಣಗಳನ್ನು ಇತ್ಯರ್ಥಪಡಿಸುವಲ್ಲಿ ಉಪ ವಿಭಾಗಾಧಿಕಾರಿಗಳ ಬದಲಿಗೆ ನಿವೃತ್ತ ಅಧಿಕಾರಿಗಳನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನಾಗಿ ನೇಮಿಸಲು ಕಾರಣಗಳೇನು; | ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ-3 ರಂತೆ ಸರ್ಕಾರವು ಸ್ವಾಧೀನತೆಯ ಹಕ್ಕನ್ನು ಹೊಂದಿರುವ ಪ್ರದೇಶಕ್ಕೆ ರಾಜ್ಯ ಸರ್ಕಾರವು ಅದೇ ಕಾಯ್ದೆಯ ಕಲಂ-4 ರಡಿ "ಮೀಸಲು ಅರಣ್ಯ" ರಚನೆಯ ಉದ್ದೇಶವನ್ನು ಹೊಂದಿದ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸುತ್ತದೆ. ಸದರಿ ಅಧಿಸೂಚನೆಯಲ್ಲಿ ಕಲಂ-4(1)(ಸಿ) ರಂತೆ ಸದರಿ ಪ್ರದೇಶದ ಹಕ್ಕು ಬಾಧ್ಯತೆಗಳನ್ನು ಅಥವಾ ಯಾವುದೇ ಖಾಸಗಿ ವ್ಯಕ್ತಿಯ ಹಕ್ಕನ್ನು, ಅರಣ್ಯ ಉತ್ಪನ್ನದ ಹಕ್ಕನ್ನು ಮತ್ತು ಮೀಸಲು ಅರಣ್ಯ ರಚನೆಯ ವಿಚಾರವಾಗಿ ಅರಣ್ಯ- ಕಾಯ್ದೆ ಮತ್ತು ನಿಯಮದಲ್ಲಿ ವಿವರಿಸಿರುವಂತೆ ಕಾನೂನಿನನ್ವಯ ಕ್ರಮ ತೆಗೆದುಕೊಳ್ಳಲು ಅರಣ್ಯ ವ್ಯವಸ್ಥಾಪನಾಧಿಕಾರಿಯನ್ನು ನೇಮಕ ಮಾಡುತ್ತದೆ. ಸದರಿ ನೇಮಕವು ಕಲಂ-4 ರಡಿ ಅಧಿಸೂಚನೆಯಾಗುವ ಪ್ರತಿ ಪ್ರಕರಣದಲ್ಲಿಯೂ ಪ್ರತಿ ಪ್ರಕರಣದ ವ್ಯಾಪ್ತಿ ಪ್ರದೇಶದ ಅರಣ್ಯ ವ್ಯವಸ್ಥಾಪನಾಧಿಕಾರಿಗಳ ನೇಮಕವು ಸದರಿ ಅಧಿಸೂಚನೆಯಲ್ಲಿಯೇ ಸ್ಪಷ್ಟಪಡಿಸಲಾಗುತ್ತದೆ. ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಪ್ರಕರಣವನ್ನು ನ್ಯಾಯಾಧೀಕರಣದಂತೆ ಜರುಗಿಸುವಾಗ್, ಸರ್ಕಾರವನ್ನು ಪ್ರಾದೇಶಿಕ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸದರಿ ಪ್ರಕರಣದಲ್ಲಿ ಪ್ರತಿವಾದಿ ಸ್ಥಾನದಲ್ಲಿ ಪ್ರತಿನಿಧಿಸಲು ಸರ್ಕಾರವು ಸದರಿ ಅಧಿಸೂಚನೆಯಲ್ಲಿಯೇ ನೇಮಕ ಮಾಡುತ್ತದೆ. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಬಳ್ಳಾರಿ, ಶಿವಮೊಗ್ಗ ಮತ್ತು ಮಂಗಳೂರಿನ ಕೇಂದ್ರಸ್ಥಾನದಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿ ಹುದ್ದೆಗಳ ಮೂರು ಹುದ್ದೆಗಳು ಇರುತ್ತದೆ. ಸಾಮಾನ್ಯವಾಗಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳ ಹುದ್ದೆಗೆ ಕಂದಾಯ ಇಲಾಖೆಯಿಂದ ಕಾಲ ಕಾಲಕ್ಕೆ ನಿಯೋಜಿಸಲಾದ ಅಧಿಕಾರಿಗಳು ತುಂಬಾ ಅಲ್ಪಾವಧಿ ಸೇವೆಯನ್ನು ಸದರಿ ಹುದ್ದೆಯಲ್ಲಿ ಸಲ್ಲಿಸುತ್ತಾರೆ. ಇವರ ಕಾರ್ಯ ವ್ಯಾಪ್ತಿಯನ್ನು ಮೀರಿದ ಪ್ರದೇಶಗಳಲ್ಲಿ ಆಯಾ ಕಂದಾಯ ಉಪ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಇಲಾಖೆಯ ಅಧಿಕಾರಿಗಳಾದ ಸಹಾಯಕ ಆಯುಕ್ತರು ಅವರ ನಿಗದಿತ ಕೆಲಸದೊಂದಿಗೆ ಅರಣ್ಯ ವ್ಯವಸ್ಥಾಪನೆ ಮಾಡಲು ಸರ್ಕಾರ ನೇಮಕ ಮಾಡಿರುತ್ತದೆ. ಹಲವು ಅಡೆತಡೆಗಳ ಕಾರಣ 2-3 ದಶಕಗಳಿಂದ ಕಲಂ-4 ರಡಿ ಅಧಿಸೂಚಿತ ಪ್ರದೇಶಗಳು ಅಂತಿಮವಾಗಿ, ಅಧಿಸೂಚನೆಯಾಗದೆ ಬಹುತೇಕ ಪ್ರಕರಣಗಳು ಬಾಕಿ ಉಳಿದಿರುತ್ತವೆ.<br><br>ಅಧಿಸೂಚಿತ ಪ್ರದೇಶಗಳು ಕಳೆದ 2-3 ದಶಕಗಳಿಂದ ಅರಣ್ಯ ವ್ಯವಸ್ಥಾಪನೆ ಪ್ರಕ್ರಿಯೆಗೆ ಒಳಪಟ್ಟು ಕಲಂ-17ರಡಿ ಅಂತಿಮವಾಗಿ ಅಧಿಸೂಚನೆಯಾಗದೆ ಬಾಕಿ ಉಳಿದಿರುವ ಬಗ್ಗೆ ಭಾರತದ ಸರ್ವೋಚ್ಚ ನ್ಯಾಯಾಲಯವು ದಾವೆ ಸಂ: W.P. (Civil) No.(S) 562/2009ರ ಮೇಲೆ ಹೂಡಿರುವ I.A. No.37377 of 2018 ಮತ್ತು I.A. No. 212 of 2014 ರ ವಿಚಾರಣೆಯನ್ನು ದಿನಾಂಕ: 19.07.2018 ರಂದು ಮಾನ್ಯ ನ್ಯಾಯಾಲಯವು ಕೈಗೆತ್ತಿಕೊಂಡಾಗ ತೀವ್ರ ಆಕ್ಷೇಪಣೆಯನ್ನು ಮಾಡಿರುತ್ತದೆ ಮತ್ತು ಈ ದಿಶೆಯಲ್ಲಿ ವಿಳಂಬದ ಕುರಿತಾಗಿ ಸಂಪೂರ್ಣ ಸ್ಥಿತಿಗತಿ ವರದಿಯ ಮಾಹಿತಿಯನ್ನು ಮಾನ್ಯ ನ್ಯಾಯಾಲಯದ ಸಮ್ಮುಖದಲ್ಲಿ ಸಲ್ಲಿಸಲು ಸಹ ಸೂಚಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಬಾಕಿ ಇರುವ ಪ್ರಕರಣಗಳನ್ನು ಒಂದು ಕಾಲಮಿತಿಯಲ್ಲಿ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಿತ್ತು.<br><br>ಆದ್ದರಿಂದ ಸುಮಾರು 2-3 ದಶಕಗಳಿಂದ ನೆನೆಗುದಿಗೆ ಬಿದಿದ್ದ ಅರಣ್ಯ ವ್ಯವಸ್ಥಾಪನಾ ಕಾರ್ಯಗಳನ್ನು ನಿರ್ವಹಿಸಿ ಶೀಘ್ರವಾಗಿ ವಿಲೇ ಮಾಡಲು ನಿವೃತ್ತ ಕಂದಾಯ ಉಪ ವಿಭಾಗಾಧಿಕಾರಿಗಳನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನಾಗಿ ನೇಮಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. |
| ಉ) | ಯಾವ ನಿಯಮಾವಳಿ ಪ್ರಕಾರ ಸದರಿ ಅಧಿಕಾರಿಗಳನ್ನು ನೇಮಿಸಲಾಗಿದೆ; | ಕರ್ನಾಟಕ ಅರಣ್ಯ ಕಾಯ್ದೆ-1963ರ ಕಲಂ-4(ಸಿ) ರಡಿಯಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿಯವರನ್ನು ನೇಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ಪ್ರದತ್ತವಾಗಿರುತ್ತದೆ.<br><br>ಸದರಿ ಹುದ್ದೆಗೆ ಅರಣ್ಯ ಅಧಿಕಾರಿಯನ್ನು ನೇಮಿಸಬಾರದೆನ್ನುವ ನಿಬಂಧನೆಯ ಹೊರತು ಇತರ ನಿವೃತ್ತ ಅಧಿಕಾರಿಗಳನ್ನು ನೇಮಿಸಬಾರದೆನ್ನುವ ನಿಬಂಧನೆ ಇರುವುದಿಲ್ಲ. |
| ಊ) | ಕರ್ನಾಟಕ ಅರಣ್ಯ ಕಾಯ್ದೆ-1963 ರ ಕಲಂ-4 ರಡಿ ಈ ರೀತಿ ನಿವೃತ್ತ ಅಧಿಕಾರಿಗಳನ್ನು ನೇಮಕ ಮಾಡಲು ಕಾನೂನಿನಲ್ಲಿ ಅವಕಾಶವಿದೆಯೇ; (ವಿವರ ನೀಡುವುದು) | |
| ಋ) | ಈ ರೀತಿ ನಿವೃತ್ತ ಅಧಿಕಾರಿಗಳನ್ನು ನೇಮಿಸಿರುವುದರಿಂದ ನ್ಯಾಯದಾನ ನೀಡುವಲ್ಲಿ ರೈತರಿಗೆ ಮತ್ತು ಸಾರ್ವಜನಿಕರಿಗೆ ಕಿರುಕುಳ ಮತ್ತು ಅನ್ಯಾಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ | ನಿವೃತ್ತ ಅಧಿಕಾರಿಗಳನ್ನು ನೇಮಿಸಿರುವುದರಿಂದ ನ್ಯಾಯದಾನ ನೀಡುವಲ್ಲಿ ರೈತರಿಗೆ ಮತ್ತು ಸಾರ್ವಜನಿಕರಿಗೆ ಕಿರುಕುಳ ಮತ್ತು ಅನ್ಯಾಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | ಬಂದಿದೆಯೇ; | ಸರ್ಕಾರವು ಯಾವುದೇ ಭೂಮಿಯನ್ನು ಮೀಸಲು ಅರಣ್ಯವನ್ನಾಗಿ ನಿರ್ಮಾಣ ಮಾಡಬೇಕೆಂದಾಗ ಅಂತಹ ಭೂಮಿಯನ್ನು ಒಂದು ಮೀಸಲು ಅರಣ್ಯವನ್ನಾಗಿ ರಚಿಸಬೇಕೆಂದು ತೀರ್ಮಾನಿಸಿರುವುದಾಗಿ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್-4ರಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸಬೇಕಾಗಿರುತ್ತದೆ.<br>ಮೀಸಲು ಅರಣ್ಯವನ್ನಾಗಿ ಅಧಿಸೂಚಿಸಬೇಕಿರುವ ಪ್ರದೇಶದ ಪರಿಮಿತಿಯಲ್ಲಿರುವ ಯಾವುದೇ ಭೂಮಿಯನ್ನು ಅಥವಾ ಯಾವುದೇ ಅರಣ್ಯದ ಉತ್ಪನ್ನದಲ್ಲಿ ಯಾವನೇ ವ್ಯಕ್ತಿಯು ಕ್ಲೇಮು ಮಾಡಿರುವ ಅಥವಾ ಅಂಥ ಯಾವನೇ ವ್ಯಕ್ತಿಯ ಪರವಾಗಿ ಇರುವುದಾಗಿ ಆರೋಪಣೆ ಮಾಡಿರುವ ಯಾವುದಾದರೂ ಹಕ್ಕುಗಳು ಇರುವುದರ, ಅವುಗಳ ಸ್ವಭಾವ ಮತ್ತು ವ್ಯಾಪ್ತಿಯ ಸಂಬಂಧದಲ್ಲಿ ವಿಚಾರಣೆ ನಡೆಸಲು ಮತ್ತು ಅವುಗಳನ್ನು ನಿರ್ಧರಿಸಲು ಅರಣ್ಯ ವ್ಯವಸ್ಥಾಪನಾಧಿಕಾರಿಯನ್ನು ಸರ್ಕಾರವು ನೇಮಿಸಿರುತ್ತದೆ.<br><br>ಸೆಕ್ಷನ್-5ರಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿಯು ಉದ್ಘೋಷಣೆ ಹೊರಡಿಸುವ ಮೂಲಕ ಪ್ರಸ್ತಾಪಿತ ಪ್ರದೇಶದ ಮೇಲೆ ಯಾವುದೇ ವ್ಯಕ್ತಿಗೆ ತನ್ನ ಹಕ್ಕುಗಳನ್ನು ಪ್ರತಿಪಾದಿಸಲು ಅವಕಾಶ ಕಲ್ಪಿಸಲಾಗುತ್ತದೆ.<br>ಅರಣ್ಯ ವ್ಯವಸ್ಥಾನಪಾಧಿಕಾರಿಯು ಕರ್ನಾಟಕ ಅರಣ್ಯ ಕಾಯ್ದೆ-1963ರ ಸೆಕ್ಷನ್-6 ರಿಂದ ಸೆಕ್ಷನ್-16ರಡಿ ಹಾಗೂ ಕರ್ನಾಟಕ ಅರಣ್ಯ ನಿಯಮಾವಳಿ-1969ರ ನಿಯಮ-3 ರಿಂದ ನಿಯಮ-16 ರಲ್ಲಿ ವಿವರಸಿದ ಕಾರ್ಯವಿಧಾನದಂತೆ ಅರಣ್ಯ ವ್ಯವಸ್ಥಾಪನಾ ಕಾರ್ಯವನ್ನು ಜರುಗಿಸಬೇಕಿರುತ್ತದೆ.<br><br>ಮೇಲಿನ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ, ಅರಣ್ಯ ವ್ಯವಸ್ಥಾಪನಾಧಿಕಾರಿಯು ಕರ್ನಾಟಕ ಅರಣ್ಯ ನಿಯಮಾವಳಿ-1969ರ ನಿಯಮ-16ರಲ್ಲಿ ನಿಯಮಿಸಿರುವಂತೆ ಕಾರ್ಯವ್ಯಾಪ್ತಿಯ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಮೀಸಲು ಅರಣ್ಯದ ಅಂತಿಮ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ.<br>ಸಲ್ಲಿಸಲ್ಪಟ್ಟ ಮೀಸಲು ಅರಣ್ಯದ ಪ್ರಸ್ತಾವನೆಯು ಒಪ್ಪಿಗೆಯಾದಲ್ಲಿ, ಸರ್ಕಾರವು ಸೆಕ್ಷನ್-17ರ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸುವ ಮೂಲಕ ಪ್ರಸ್ತಾಪಿತ ಪ್ರದೇಶವನ್ನು "ಮೀಸಲು ಅರಣ್ಯ" ಎಂದು ಅಧಿಸೂಚಿಸುತ್ತದೆ.<br><br>ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಈ ಮೇಲಿನ ಕಾರ್ಯಗಳನ್ನು ಕಾನೂನಿನ ಚೌಕಟ್ಟಿನಲ್ಲಿ ನಿರ್ವಹಿಸಬೇಕಾಗಿರುವುದರಿಂದ, ನ್ಯಾಯದಾನ ನೀಡುವಲ್ಲಿ ರೈತರಿಗೆ ಮತ್ತು ಸಾರ್ವಜನಿಕರಿಗೆ ಕಿರುಕುಳ ಮತ್ತು ಅನ್ಯಾಯ ಉಂಟು ಮಾಡಲು ಆಸ್ಪದವಿರುವುದಿಲ್ಲ. |
| ಎ) | ಸರ್ಕಾರದ ಆದೇಶ ಸಂಖ್ಯೆ: ಅಪಜೀ 42 ಇಪಿಸಿ 2024, ದಿನಾಂಕ: 03.02.2024 ರಂತೆ ನಿವೃತ್ತ ಅಧಿಕಾರಿಗಳ ನೇಮಕಾತಿಯನ್ನು ರದ್ದುಪಡಿಸಿ, ಉಪ ವಿಭಾಗಾಧಿಕಾರಿಗಳನ್ನು ನೇಮಿಸಲು ಯಾವ ಕಾಲಮಿತಿಯಲ್ಲಿ ಕ್ರಮ ವಹಿಸಲಾಗುವುದು? | ಕರ್ನಾಟಕ ಅರಣ್ಯ ಕಾಯ್ದೆ ಕಲಂ-4 ರಡಿಯಲ್ಲಿ ಅಧಿಸೂಚಿತ ಪ್ರದೇಶಗಳು ಕಳೆದ 2-3 ದಶಕಗಳಿಂದ ಅರಣ್ಯ ವ್ಯವಸ್ಥಾಪನೆ ಪ್ರಕ್ರಿಯೆಗೆ ಒಳಪಟ್ಟು, ಕಲಂ-17 ರಡಿ ಅಂತಿಮವಾಗಿ ಅಧಿಸೂಚನೆಯಾಗದೆ ಬಾಕಿ ಉಳಿದಿರುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಾವೆ ಸಂಖ್ಯೆ: Writ petition (Civil) No(S) 562/2009 ರ ಮೇಲೆ ಹೂಡಿರುವ I.A No 37377 of 2018 ಮತ್ತು I.A |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | 212 of 2014 ರ ವಿಚಾರಣೆಯನ್ನು ದಿನಾಂಕ:19.07.2018 ರಂದು ಮಾನ್ಯ ನ್ಯಾಯಾಲಯವು ತೀವ್ರ ಆಕ್ಷೇಪಣೆಯನ್ನು ಮಾಡಿರುವ ಸಂದರ್ಭದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಅಪಜೀ 171 ಅಪಸೇ 2018, ದಿನಾಂಕ:31.07.2019 ರಲ್ಲಿ ವಿವರಿಸಿರುವ ಷರತ್ತು ಮತ್ತು ನಿಬಂಧನೆಗಳನ್ವಯ ಕ್ರಮ ಕೈಗೊಳ್ಳಲಾಗಿದೆ. |

ಸಂಖ್ಯೆ: ಅಪಜೀ 87 ಎಫ್ಎಎಫ್ 2024

(ಈಶ್ವರ್ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.

ಅನುಬಂಧ-1

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಅರಣ್ಯ ಕಾಯ್ದೆ 1963 ಮತ್ತು ನಿಯಮ 1969ರಂತೆ ಮುಂದುವರೆದ ಪ್ರಕ್ರಿಯೆಯಾದ ಅರಣ್ಯ ವ್ಯವಸ್ಥಾಪನೆ ಕಾರ್ಯ ಮಾಡಲು ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನು ವಿಶೇಷವಾಗಿ ತಾತ್ಕಾಲಿಕ ಹುದ್ದೆಗಳನ್ನು ಸೃಜಿಸಿ ನೇಮಕ ಮಾಡುವ ಕುರಿತು.

ಪ್ರಸ್ತಾವನೆ:

ಕರ್ನಾಟಕ ಅರಣ್ಯ ಕಾಯ್ದೆ 1963 (ಸಂಕ್ಷಿಪ್ತವಾಗಿ 1963 ರ ಕಾಯ್ದೆ) ಕಲಂ-3 ರಂತೆ ಸರ್ಕಾರವು ಸ್ವಾಧೀನತೆಯ ಹಕ್ಕನ್ನು ಹೊಂದಿರುವ ಪ್ರದೇಶಕ್ಕೆ ರಾಜ್ಯ ಸರ್ಕಾರವು ಅದೇ ಕಾಯ್ದೆಯ ಕಲಂ-4 ರಡಿ 'ಮೀಸಲು ಅರಣ್ಯ' ರಚನೆಯ ಉದ್ದೇಶವನ್ನು ಹೊಂದಿದ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸುತ್ತದೆ. ಸದರಿ ಅಧಿಸೂಚನೆಯಲ್ಲಿ ಕಲಂ-4(1) (ಸಿ) ರಂತೆ ಸದರಿ ಪ್ರದೇಶದ ಹಕ್ಕು ಬಾಧ್ಯತೆಗಳನ್ನು ಅಥವಾ ಯಾವುದೇ ಖಾಸಗಿ ವ್ಯಕ್ತಿಯ ಹಕ್ಕನ್ನು ಅರಣ್ಯ ಉತ್ಪನ್ನದ ಹಕ್ಕನ್ನು ಮತ್ತು ಮೀಸಲು ಅರಣ್ಯ ರಚನೆಯ ವಿಚಾರವಾಗಿ ಅರಣ್ಯ ಕಾಯ್ದೆ ಮತ್ತು ನಿಯಮದಲ್ಲಿ ವಿವರಿಸಿರುವಂತೆ ಕಾನೂನಿನ್ವಯ ಕ್ರಮ ತೆಗೆದುಕೊಳ್ಳಲು ಅರಣ್ಯ ವ್ಯವಸ್ಥಾಪನಾಧಿಕಾರಿಯನ್ನು ನೇಮಕ ಮಾಡುತ್ತದೆ. ಸದರಿ ನೇಮಕವು ಕಲಂ-4 ರಡಿ ಅಧಿಸೂಚನೆಯಾಗುವ ಪ್ರತಿ ಪ್ರಕರಣದಲ್ಲಿಯೂ ಪ್ರತಿ ಪ್ರಕರಣದ ವ್ಯಾಪ್ತಿ ಪ್ರದೇಶದ ಅರಣ್ಯ ವ್ಯವಸ್ಥಾಪನಾಧಿಕಾರಿಗಳ ನೇಮಕವು ಸದರಿ ಅಧಿಸೂಚನೆಯಲ್ಲಿಯೇ ಸ್ಪಷ್ಟಪಡಿಸಲಾಗುತ್ತದೆ. ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಪ್ರಕರಣವನ್ನು ನ್ಯಾಯಾಧೀಕರಣದಂತೆ ಜರುಗಿಸುವಾಗ್ಗೆ ಸರ್ಕಾರವನ್ನು ಪ್ರಾದೇಶಿಕ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸದರಿ ಪ್ರಕರಣದಲ್ಲಿ ಪ್ರತಿವಾದಿ ಸ್ಥಾನದಲ್ಲಿ ಪ್ರತಿನಿಧಿಸಲು ಸರ್ಕಾರವು ಸದರಿ ಅಧಿಸೂಚನೆಯಲ್ಲಿಯೇ ನೇಮಕ ಮಾಡುತ್ತದೆ. ಈವರೆಗೂ 1963 ರಿಂದ ಕಲಂ-4 ರಡಿ ಮೀಸಲು ಅರಣ್ಯವೆಂದು ಅಧಿಸೂಚನೆಗೊಂಡ ಪ್ರಕರಣಗಳಲ್ಲಿ ಸರಿಸುಮಾರು 497 ಪ್ರಕರಣಗಳಲ್ಲಿ ಕಲಂ-5 ರಿಂದ ಕಲಂ-16ರವರೆಗಿನ ವಿವಿಧ ಹಂತಗಳನ್ನು ಪೂರ್ಣಗೊಳಿಸಿ ತದನಂತರ ಕಲಂ-17 ರಡಿ ಅಂತಿಮವಾಗಿ ಮೀಸಲು ಅರಣ್ಯವೆಂದು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಧಿಸೂಚನೆಯಾಗಿರುತ್ತದೆ.

ಬಳ್ಳಾರಿ, ಶಿವಮೊಗ್ಗ ಮತ್ತು ಮಂಗಳೂರಿನ ಕೇಂದ್ರಸ್ಥಾನದಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿ ಹುದ್ದೆಗಳ ಮೂರು ಹುದ್ದೆಗಳು ಇರುತ್ತದೆ. ಸಾಮಾನ್ಯವಾಗಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳ ಹುದ್ದೆಗೆ ಕಂದಾಯ ಇಲಾಖೆಯಿಂದ ಕಾಲ ಕಾಲಕ್ಕೆ ನಿಯೋಜಿಸಲಾದ ಅಧಿಕಾರಿಗಳು ತುಂಬಾ ಅಲ್ಪಾವಧಿ ಸೇವೆಯನ್ನು ಸದರಿ ಹುದ್ದೆಯಲ್ಲಿ ಸಲ್ಲಿಸುತ್ತಾರೆ. ಇವರ ಕಾರ್ಯ ವ್ಯಾಪ್ತಿಯನ್ನು ಮೀರಿದ ಪ್ರದೇಶಗಳಲ್ಲಿ ಆಯಾ ಕಂದಾಯ ಉಪವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಂದಾಯ ಇಲಾಖೆಯ ಅಧಿಕಾರಿಗಳಾದ ಸಹಾಯಕ ಆಯುಕ್ತರು ಅವರ ನಿಗದಿತ ಕೆಲಸದೊಂದಿಗೆ ಅರಣ್ಯ ವ್ಯವಸ್ಥಾಪನೆ ಮಾಡಲು ಸರ್ಕಾರ ನೇಮಕ ಮಾಡಿರುತ್ತದೆ. ಹಲವು ಅಡೆತಡೆಗಳ ಕಾರಣ 2-3 ದಶಕಗಳಿಂದ ಕಲಂ-4 ರಡಿ ಅಧಿಸೂಚಿತ ಪ್ರದೇಶವು ಅಂತಿಮವಾಗಿ ಅಧಿಸೂಚನೆಯಾಗದೆ 856 ಪ್ರಕರಣಗಳು ಬಾಕಿ ಉಳಿದಿರುತ್ತದೆ.

1963 ರ ಕಾಯ್ದೆ ಕಲಂ-4 ರಡಿ ಅಧಿಸೂಚಿತ ಪ್ರದೇಶಗಳು ಕಳೆದ 2-3 ದಶಕಗಳಿಂದ ಅರಣ್ಯ ವ್ಯವಸ್ಥಾಪನೆ ಪ್ರಕ್ರಿಯೆಗೆ ಒಳಪಟ್ಟು ಕಲಂ-17 ರಡಿ ಅಂತಿಮವಾಗಿ ಅಧಿಸೂಚನೆಯಾಗದೆ ಬಾಕಿ ಉಳಿದಿರುವ ಬಗ್ಗೆ ಭಾರತದ ಸರ್ವೋಚ್ಛ ನ್ಯಾಯಾಲಯವು ದಾವೆ ಸಂಖ್ಯೆ: Writ petition (Civil) NO(S). 562/2009ರ ಮೇಲೆ ಹೂಡಿರುವ **I.A NO.37377 of 2018** ಮತ್ತು **I.A 212 of 2014** ರ ವಿಚಾರಣೆಯನ್ನು ದಿನಾಂಕ: **19.07.2018** ರಂದು ಮಾನ್ಯ ನ್ಯಾಯಾಲಯವು ಕೈಗೆತ್ತಿಕೊಂಡಾಗ ತೀವ್ರ ಆಕ್ಷೇಪಣೆಯನ್ನು ಮಾಡಿರುತ್ತದೆ ಮತ್ತು ಈ ದಿಶೆಯಲ್ಲಿ ವಿಳಂಬದ ಕುರಿತಾಗಿ ಸಂಪೂರ್ಣ ಸ್ಥಿತಿಗತಿ ವರದಿಯ ಮಾಹಿತಿಯನ್ನು ಮಾನ್ಯ ನ್ಯಾಯಾಲಯದ ಸಮ್ಮುಖದಲ್ಲಿ ಸಲ್ಲಿಸಲು ಸಹ ಸೂಚಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಬಾಕಿ ಇರುವ ಪ್ರಕರಣಗಳನ್ನು ಆದ್ದರಿಂದ, ಒಂದು ಕಾಲಮಿತಿಯಲ್ಲಿ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಿದೆ.

ಆದ್ದರಿಂದ, ಅರಣ್ಯ ವ್ಯವಸ್ಥಾಪನಾಧಿಕಾರಿಯ ತಾತ್ಕಾಲಿಕ ಹುದ್ದೆಗಳನ್ನು ಸೃಜಿಸಿ ಅವುಗಳನ್ನು ನಿಗದಿತ ಕಾಲಾವಧಿಗೆ ತಾತ್ಕಾಲಿಕವಾಗಿ ಭರ್ತಿ ಮಾಡಿ ಸ್ಥಗಿತಗೊಂಡಿರುವ ರಾಜ್ಯ ವ್ಯಾಪಿ ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ಪೂರ್ಣಗೊಳಿಸುವ ಉದ್ದೇಶದಿಂದ ಇಲಾಖೆಯಲ್ಲಿರುವ ಮೂರು ಎಫ್.ಎಸ್.ಓ ಹುದ್ದೆಗಳನ್ನು ಹೊರತುಪಡಿಸಿ ಹೊಸದಾಗಿ ಈ ಕೆಳಕಂಡ ಹುದ್ದೆಗಳನ್ನು ನಿಯೋಜನೆ / ಗುತ್ತಿಗೆ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಇತರೆ ಪೂರಕ ಸಿಬ್ಬಂದಿಯೊಂದಿಗೆ ತಾತ್ಕಾಲಿಕವಾಗಿ ಸೃಜಿಸಲು ನಿರ್ಧರಿಸಲಾಗಿರುತ್ತದೆ.

| ಕ್ರ ಸಂ. | ಹುದ್ದೆಯ. ಪದನಾಮ | ಆರ್ಥಿಕ ಇಲಾಖೆಯು ಸೃಜಿಸಲು ಸಹಮತಿಸಿದ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಷರಾ |
|---|---|---|---|---|
| 1 | ಅರಣ್ಯ ವ್ಯವಸ್ಥಾಪನಾಧಿಕಾರಿ | 10 | ಗುತ್ತಿಗೆ | ಗುತ್ತಿಗೆ ಆದಲ್ಲಿ ಮಾಸಿಕ ರೂ.50,000/- ಮಿತಿಯೊಳಗೆ |
| 2 | ಕಂದಾಯ ನಿರೀಕ್ಷಕರು | 10 | ನಿಯೋಜನೆ / ಗುತ್ತಿಗೆ | ಗುತ್ತಿಗೆ ಆದಲ್ಲಿ ಮಾಸಿಕ ರೂ.25,000/- ಮಿತಿಯೊಳಗೆ |
| 3 | ಪ್ರಥಮ ದರ್ಜೆ ಸಹಾಯಕ | 10 | ನಿಯೋಜನೆ | - |
| 4 | ಮೋಜಣಿದಾರರು | 10 | ನಿಯೋಜನೆ / ಗುತ್ತಿಗೆ | ಗುತ್ತಿಗೆ ಆದಲ್ಲಿ ಮಾಸಿಕ ರೂ.25,000/- ಮಿತಿಯೊಳಗೆ |

| | | | | |
|---|---|---|---|---|
| 5 | ಗ್ರೂಪ್-ಡಿ | 10 | ಹೊರಗುತ್ತಿಗೆ | ಮಾಸಿಕ ರೂ.25,000/- ಮಿತಿಯೊಳಗೆ |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು; ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಅಪಜೀ 171 ಅಪಸೇ 2018, ಬೆಂಗಳೂರು, ದಿನಾಂಕ: 31-07-2019.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ಅರಣ್ಯ ಕಾಯ್ದೆ 1963 ಮತ್ತು ನಿಯಮ 1969ರಂತೆ ಮುಂದುವರೆದ ಪ್ರಕ್ರಿಯೆಯಾದ ಅರಣ್ಯ ವ್ಯವಸ್ಥಾಪನೆ ಕಾರ್ಯ ಮಾಡಲು ಈ ಕೆಳಕಂಡ ಹುದ್ದೆಗಳನ್ನು ಎರಡು ವರ್ಷದ ಅವಧಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಸೃಜಿಸಿ ಆದೇಶಿಸಲಾಗಿದೆ:-

| ಕ್ರ ಸಂ. | ಹುದ್ದೆಯ ಪದನಾಮ | ಆರ್ಥಿಕ ಇಲಾಖೆಯು ಸೃಜಿಸಲು ಸಹಮತಿಸಿದ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಷರಾ |
|---|---|---|---|---|
| 1 | ಅರಣ್ಯ ವ್ಯವಸ್ಥಾಪನಾಧಿಕಾರಿ | 10 | ಗುತ್ತಿಗೆ | ಗುತ್ತಿಗೆ ಆದಲ್ಲಿ ಮಾಸಿಕ ರೂ.50,000/- ಮಿತಿಯೊಳಗೆ |
| 2 | ಕಂದಾಯ ನಿರೀಕ್ಷಕರು | 10 | ನಿಯೋಜನೆ / ಗುತ್ತಿಗೆ | ಗುತ್ತಿಗೆ ಆದಲ್ಲಿ ಮಾಸಿಕ ರೂ.25,000/- ಮಿತಿಯೊಳಗೆ |
| 3 | ಪ್ರಥಮ ದರ್ಜೆ ಸಹಾಯಕ | 10 | ನಿಯೋಜನೆ | - |
| 4 | ಮೋಜಣಿದಾರರು | 10 | ನಿಯೋಜನೆ / ಗುತ್ತಿಗೆ | ಗುತ್ತಿಗೆ ಆದಲ್ಲಿ ಮಾಸಿಕ ರೂ.25,000/- ಮಿತಿಯೊಳಗೆ |
| 5 | ಗ್ರೂಪ್-ಡಿ | 10 | ಹೊರಗುತ್ತಿಗೆ | ಮಾಸಿಕ ರೂ.25,000/- ಮಿತಿಯೊಳಗೆ |

ಅರಣ್ಯ ವ್ಯವಸ್ಥಾಪನಾಧಿಕಾರಿಗಳ ಹುದ್ದೆಗೆ ನಿವೃತ್ತ ಸಹಾಯಕ ಆಯುಕ್ತರುಗಳ (ಕಂದಾಯ) ರವರನ್ನು ನೇಮಕ ಮಾಡಿಕೊಳ್ಳುವುದು ಹಾಗೂ ಅವರುಗಳ ಉಪಯೋಗಕ್ಕಾಗಿ ಹೊರಗುತ್ತಿಗೆ ಆಧಾರ / ಬಾಡಿಗೆ ಆಧಾರದ ಮೇಲೆ ಒಂದು ವಾಹನವನ್ನು ಸಿಆಸು ಇಲಾಖೆಯ ನಿಯಮಗಳನ್ವಯ ಮಾಸಿಕ ರೂ.25000/- ಮಿತಿಯೊಳಗೆ ಪಡೆದು ಕೊಳ್ಳುವುದು. ಈ ಅಧಿಕಾರಿಗಳ ಕೆಲಸ ನಿರ್ವಹಿಸಲು ಸಮೀಪದ ಅರಣ್ಯ ಇಲಾಖೆಯ ಕಛೇರಿಗಳಲ್ಲಿ ಸ್ಥಳಾವಕಾಶ ಮಾಡಿಕೊಡತಕ್ಕದ್ದು.

ಷರತ್ತು ಮತ್ತು ನಿಬಂಧನೆಗಳು:-

1. ನಿವೃತ್ತ ಕೆ.ಎ.ಎಸ್. ಅಧಿಕಾರಿಗಳ ಸೇವೆಯನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಗರಿಷ್ಠ ಎರಡು ವರ್ಷಗಳ ಅವಧಿಗೆ ನೇಮಕ ಮಾಡುವುದು.
2. ಈ ಅಧಿಕಾರಿಗಳಿಗೆ ನಿಯಮಾನುಸಾರ ವೇತನ ಹಾಗೂ ಇತರೆ ಭತ್ಯೆಗಳನ್ನು ನಿಗಧಿಪಡಿಸಿ. ಈ ವೆಚ್ಚವನ್ನು ಇಲಾಖೆಯ ಅನುಧಾನದಿಂದ ಭರಿಸತಕ್ಕದ್ದು.

3. ಕಂದಾಯ ಇಲಾಖೆಯು ನಿವೃತ್ತ ಅಧಿಕಾರಿಗಳ ಪಟ್ಟಿಯನ್ನು (Panel) ಸಿದ್ಧಪಡಿಸಿಕೊಂಡು ಭೂ ಕೋರಿಕೆ ಸಂಸ್ಥೆಗಳ ಬೇಡಿಕೆ ಸಲ್ಲಿಸಿದಲ್ಲಿ ಅಂತಹ ನಿವೃತ್ತ ಅಧಿಕಾರಿಗಳ ಸೇವೆಯನ್ನು ಒದಗಿಸುವುದು.

4. ಈ ರೀತಿ ನೇಮಕ ಮಾಡಿಕೊಳ್ಳುವ ನಿವೃತ್ತ ಅಧಿಕಾರಿಗಳಿಗೆ ಭೂ ಸ್ವಾಧೀನ ಕಾಯ್ದೆ ಹಾಗೂ ರಾಜ್ಯ ವಿವಿಧ ಭೂಸ್ವಾಧೀನ ಕಾಯ್ದೆಗಳಡಿಯಲ್ಲಿ (ಕರ್ನಾಟಕ ಅರಣ್ಯ ಕಾಯ್ದೆ 1963, ಕರ್ನಾಟಕ ಅರಣ್ಯ ನಿಯಮಗಳು 1969, ವನ್ಯಜೀವಿ ಕಾಯ್ದೆ 1972, ವನ್ಯಜೀವಿ ರಕ್ಷಣೆ ನಿಯಮಗಳು 1973, ಕರ್ನಾಟಕ ಅರಣ್ಯ ಕೈಪಿಡಿ 1980, ಅರಣ್ಯ (ಸಂರಕ್ಷಣೆ) ಕಾಯ್ದೆ 1980, ಅರಣ್ಯ (ಸಂರಕ್ಷಣೆ) ನಿಯಮಗಳು 1981)ಗಳಲ್ಲಿ ಪ್ರದತ್ತವಾದ ಶಾಸನಬದ್ಧ ಅಧಿಕಾರವನ್ನು ಚಲಾಯಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 695 ವೆಚ್ಚ-5/18, ದಿನಾಂಕ: 04.05.2019ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಸಿ. ರಾಜೇಂದ್ರಕುಮಾರ್)
ಸರ್ಕಾರದ ಉಪ ಕಾರ್ಯದರ್ಶಿ
(ಸೇವೆಗಳು ಮತ್ತು ಸಮನ್ವಯ)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

ಇವರಿಗೆ:

ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಮೈಸೂರು ರಸ್ತೆ, ಬೆಂಗಳೂರು-560059 - ರಾಜ್ಯಪತ್ರದಲ್ಲಿ ಪ್ರಕಟಿಸಿ, ಪ್ರಕಟಿಸಿದ 200 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು), ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕೊಠಡಿ ಸಂಖ್ಯೆ: 437, 4ನೇ ಮಹಡಿ, 2ನೇ ದ್ವಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಕಳುಹಿಸಿಕೊಡುವಂತೆ ಕೋರಿದೆ.

ಪ್ರತಿಗಳು:

1. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು - 560001.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಅರಣ್ಯಪಡೆ ಮುಖ್ಯಸ್ಥರು) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಬೆಂಗಳೂರು.
6. ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ / ಓಡಿಜಿಸಿ.

******

ಅನುಬಂಧ-2

**ಕರ್ನಾಟಕ ಸರ್ಕಾರ**

**ಸಂಖ್ಯೆ**: ಎಫ್‌ಇಇ 239 ಎಫ್‌ಎನ್‌ಜಿ 2023 (ಇ)

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:**11-12-2023**

## ಅಧಿಸೂಚನೆ

ಕರ್ನಾಟಕ ಅರಣ್ಯ ಕಾಯ್ದೆ, 1963ರ ಕಲಂ-4 ರಡಿ ಅಧಿಸೂಚಿಸಿರುವ ಪ್ರಕರಣಗಳಲ್ಲಿ ಅರಣ್ಯ ವ್ಯವಸ್ಥಾಪನೆ ಕಾರ್ಯ ಮಾಡಲು ವಿವಿಧ ಕಾರ್ಯಕ್ಷೇತ್ರಗಳಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವಂತೆ ಗುತ್ತಿಗೆ ಆಧಾರದ ಮೇಲೆ ದಿನಾಂಕ: 17.11.2023 ರಿಂದ ಜಾರಿಗೆ ಬರುವಂತೆ ದಿನಾಂಕ: 16.11.2024 ರವರೆಗೆ ಒಂದು ವರ್ಷದ ಅವಧಿಗೆ ನೇಮಕಾತಿಯನ್ನು ವಿಸ್ತರಿಸಿ ಆದೇಶಿಸಿದೆ.

| ಕ್ರ. ಸಂ. | ಅರಣ್ಯ ವ್ಯವಸ್ಥಾಪನಾಧಿಕಾರಿಯವರ ಕಾರ್ಯ ಕ್ಷೇತ್ರ | ಕೇಂದ್ರ ಸ್ಥಾನ | ಕಂದಾಯ ಉಪ ವಿಭಾಗಗಳು | ಅರಣ್ಯ ವ್ಯವಸ್ಥಾಪನಾಧಿಕಾರಿಯವರ ಹುದ್ದೆ ವಿವರ | ಕಾರ್ಯ ಅವಧಿ |
|---|---|---|---|---|---|
| 1 | 2 | 3 | 4 | 5 | 6 |
| 1. | ಸಾಗರ | ಸಾಗರ | ಸಾಗರ | ಶ್ರೀ ಕೆ. ಸುಬ್ರಯ ಕಾಮತ್ | 17.11.2023 ರಿಂದ 16.11.2024. |
| 2. | ಚಿಕ್ಕಮಗಳೂರು | ಚಿಕ್ಕಮಗಳೂರು | ಚಿಕ್ಕಮಗಳೂರು | ಶ್ರೀ ಕೆ. ಸುಬ್ರಯ ಕಾಮತ್ (ಹೆಚ್ಚುವರಿ ಕಾರ್ಯ) | 17.11.2023 ರಿಂದ 16.11.2024. |
| 3. | ಕಡೂರು | ಕಡೂರು | ತರೀಕೆರೆ | ಶ್ರೀ ಹೆಚ್.ಎಸ್ ರಾಮಕೃಷ್ಣ | 17.11.2023 ರಿಂದ 16.11.2024. |
| 4. | ಮೈಸೂರು, ಚಾಮರಾಜನಗರ, ಕೊಡಗು | ಮೈಸೂರು | ಹುಣಸೂರು, ಮೈಸೂರು, ಕೊಳ್ಳೇಗಾಲ, ಮಡಿಕೇರಿ | ಶ್ರೀಮತಿ ರೇಣುಕಾಂಬ | 17.11.2023 ರಿಂದ 16.11.2024. |
| 5. | ಮಂಡ್ಯ, ರಾಮನಗರ | ಮಂಡ್ಯ | ಮಂಡ್ಯ, ಪಾಂಡವಪುರ, ರಾಮನಗರ | ಶ್ರೀ ಮುಜಿಬ್ ಅಹಮದ್ | 17.11.2023 ರಿಂದ 16.11.2024. |
| 6. | ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ | ಕೋಲಾರ | ಕೋಲಾರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ | ಶ್ರೀ ವಿರೂಪಾಕ್ಷಿ | 17.11.2023 ರಿಂದ 16.11.2024. |

..2

| | | | | | |
|---|---|---|---|---|---|
| 7. | ತುಮಕೂರು, ಹಾಸನ | ಹಾಸನ | ಮಧುಗಿರಿ, ತಿಪಟೂರು, ತುಮಕೂರು, ಹಾಸನ, ಸಕಲೇಶಪುರ | ಶ್ರೀ ಎಸ್ ಪಿ ಕುಲ್ಕರ್ಣಿ | 17.11.2023 ರಿಂದ 16.11.2024. |
| 8. | ಕಲಬುರಗಿ,, ಬೀದರ್ | ಕಲಬುರ್ಗಿ | ಕಲಬುರಗಿ, ಸೇಡಂ, ಬೀದರ್, ಬಸವ ಕಲ್ಯಾಣ | ಶ್ರೀ ರವಿಕಿರಣ್ ವಂಟಿ | 17.11.2023 ರಿಂದ 16.11.2024. |
| 9. | ರಾಯಚೂರು, ಯಾದಗಿರಿ | ರಾಯಚೂರು | ರಾಯಚೂರು, ಲಿಂಗಸುಗೂರು, ಯಾದಗಿರಿ | ಶ್ರೀ ರವಿಕಿರಣ್ ವಂಟಿ (ಹೆಚ್ಚುವರಿ ಕಾರ್ಯ) | 17.11.2023 ರಿಂದ 16.11.2024. |
| 10. | ಧಾರವಾಡ, ಬೆಳಗಾವಿ, ವಿಜಯಪುರ, ಹಾವೇರಿ, ದಾವಣಗೆರೆ, ಚಿತ್ರದುರ್ಗ, ಗದಗ, ಬಾಗಲಕೋಟೆ | ಧಾರವಾಡ | ಧಾರವಾಡ, ಬೆಳಗಾವಿ, ಬೈಲಹೊಂಗಲ, ಚಿಕ್ಕೋಡಿ, ಇಂಡಿ, ವಿಜಯಪುರ, ಹಾವೇರಿ, ಹೊನ್ನಾಳಿ, ಚಿತ್ರದುರ್ಗ, ಸವಣೂರು, ದಾವಣಗೆರೆ, ಗದಗ, ಬಾಗಲಕೋಟೆ, ಜಮಖಂಡಿ | ಶ್ರೀ ಎ.ಎ. ಇಳ್ಕಲ್ | 17.11.2023 ರಿಂದ 16.11.2024. |

ಮೇಲಿನಂತೆ ನೇಮಕಾತಿ ಆಗಿರುವ ಅರಣ್ಯ ವ್ಯವಸ್ಥಾಪನಾಧಿಕಾರಿಗಳಿಗೆ ಭೂ ಸ್ವಾಧೀನ ಕಾಯ್ದೆ ಹಾಗೂ ರಾಜ್ಯ ವಿವಿಧ ಭೂಸ್ವಾಧೀನ ಕಾಯ್ದೆಗಳಡಿಯಲ್ಲಿ [ಕರ್ನಾಟಕ ಅರಣ್ಯ ಕಾಯ್ದೆ, 1963, ಕರ್ನಾಟಕ ಅರಣ್ಯ ನಿಯಮಗಳು, 1969, ವನ್ಯಜೀವಿ ಕಾಯ್ದೆ, 1972, ವನ್ಯಜೀವಿ ರಕ್ಷಣೆ ನಿಯಮಗಳು, 1973, ಕರ್ನಾಟಕ ಅರಣ್ಯ ಕೈಪಿಡಿ, 1980, ಅರಣ್ಯ (ಸಂರಕ್ಷಣೆ) ಕಾಯ್ದೆ, 1980, ಅರಣ್ಯ (ಸಂರಕ್ಷಣೆ) ನಿಯಮಗಳು, 1981] ಪ್ರದತ್ತವಾದ ಶಾಸನಬದ್ಧ ಅಧಿಕಾರವನ್ನು ಚಲಾಯಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
11/12/23
**(ಬಿ. ವೆಂಕಟೇಶಮೂರ್ತಿ)**
ಸರ್ಕಾರದ ಉಪ ಕಾರ್ಯದರ್ಶಿ,
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
(ಸೇವೆಗಳು ಮತ್ತು ಸಮನ್ವಯ)

**ಇವರಿಗೆ:**

ನೋಡಲ್ ಅಧಿಕಾರಿ ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ (ಸೇವೆಗಳು), ಬೆಂಗಳೂರು- ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು.